ಕರ್ನಾಟಕ ಸರ್ಕಾರ

ಜಿಲ್ಲಾ ಪಂಚಾಯತ ಬೆಳಗಾವಿ

ತಾಲೂಕಾ ಪಂಚಾಯತ ರಾಯಬಾಗ

# ಗ್ರಾಮ ಪಂಚಾಯತ ಕಾರ್ಯಾಲಯ ನಿಲಜಿ

ತಾ. ರಾಯಬಾಗ ಜಿ. ಬೆಳಗಾವಿ

---

ಕ್ರ. ಸಂಖ್ಯೆ:________ ದಿನಾಂಕ : 01-05-2020

ಗೆ,

ಸನ್ಮಾನ್ಯ ಶ್ರೀ ಮಹಾಂತೇಶ ಅಣ್ಣಾ ಕವಟಗಿಮಠ

**ವಿಧಾನ ಪರಿಷತ್ ಸದಸ್ಯರು ಹಾಗೂ ವಿ.ಪ.ಮುಖ್ಯ ಸಚೇತಕರು**

ಕರ್ನಾಟಕ ಸರಕಾರ,

ಮನವಿದಾರರು :- ಅಧ್ಯಕ್ಷರು,ಉಪಾಧ್ಯಕ್ಷರು,ಗ್ರಾ.ಪಂಚಾಯತ ಸದಸ್ಯರು ನಿಲಜಿ ತಾ// ರಾಯಬಾಗ ಜಿ ಬೆಳಗಾವಿ

ವಿಷಯ:- ಖಾಲಿ ಇರುವ ಗ್ರಾಮ ಪಂಚಾಯತ ಅಧ್ಯಕ್ಷರನ್ನು ಉಪಾದ್ಯಕ್ಷರನ್ನು ಹಾಗೂ ಸದಸ್ಯರನ್ನು ಮುಂಬರುವ ಗ್ರಾ.ಪಂ ಚುನಾವಣೆ ವರೆಗೆ ಪಂಚಾಯತಿಯಲ್ಲಿ ಮುಂದುವರೆಸುವ ಕುರಿತು.

ಮಾನ್ಯರೆ,

**ಈ ಮೇಲ್ಕಾಣಿಸಿದ ವಿಷಯಕ್ಕೆ ಸಂಬಂದಿಸಿಂತೆ ಗ್ರಾಮ ಪಂಚಾಯತ ಅಧ್ಯಕ್ಷರ,ಉಪಾಧ್ಯಕ್ಷರ ಮತ್ತು** ಸದಸ್ಯರ ಅಧಿಕಾರ ಅವಧಿಯು ದಿನಾಂಕ 16/06/2020 ಕ್ಕೆ 5 ವರ್ಷ ಪೂರ್ಣಗೊಂಡು ಅಧಿಕಾರ ಮುಗಿಯುತ್ತದೆ, ಆದರೆ ಈ ವರ್ಷ ಕೋರೊನಾ (ಕೋವಿಡ್ 19 ) ರ ಪ್ರಾಣಾಪಾಯದ ಕ್ರೂರ ಪರಿಣಾಮದಿಂದ ಪ್ರಪಂಚ ತ್ತತರಿಸಿ ಹೋಗಿದೆ,ಈ ಮಾಹಾಮಾರಿಯನ್ನು ನಿಯಂತ್ರಿಸಲು ಮುಂಜಾಗ್ರತೆ ಹಾಗೂ ಸಂಪೂರ್ಣ **ಕೋರೊನಾ ವೈರಸ ತೊಡೆದು ಹಾಕಲು ಕರ್ನಾಟಕ ಸರಕಾರ ಸಂಘ ಸಂಸ್ಥೆಗಳು ಚುನಾಯಿತ ಪ್ರತಿನಿಧಿಗಳು** ಗ್ರಾಮ ಪಂಚಾಯತಿಯಲ್ಲಿ ಕೋರೊನಾ ಕಾರ್ಯಪಡೆ ಕಟ್ಟಿಕೊಂಡು ಶ್ರಮಿಸುತ್ತಿದ್ದಾರೆ, ಆದರಿಂದ ಸರಕಾರಕ್ಕೆ ಹಾಗೂ ಚುನಾವಣಾ ಆಯೋಗಕ್ಕೆ ಗ್ರಾ.ಪಂ ಚುನಾವಣೆಯನ್ನು ನಿಗದಿತ ಸಮಯಕ್ಕೆ ನಡೆಸಲಾಗಿಲ್ಲಾ, ಇನ್ನು **ಕೂಡ ಚುನಾವಣೆ ಯಾವಾಗ ಆಗುತ್ತದೆ ಎಂದು ನಿಗಧಿ ಆಗಿಲ್ಲಾ, ಆದ್ದರಿಂದ ಗ್ರಾ.ಪಂ ಚುನಾಯಿತ ಪ್ರತಿನಿಧಿಗಳ ಅಧಿಕಾರ ಮೊಟಕು ಗೊಳಿಸಿ ಆಡಳಿತಾಧಿಕಾರಿಗಳನ್ನು ನೇಮಿಸುವ ಸಂಬವವಿದೆ.**

ಗ್ರಾ.ಪಂ ಅಧ್ಯಕ್ಷರು ಉಪಾಧ್ಯಕ್ಷರು ಸದಸ್ಯರು ಕೋರೊನಾ ವೈರಸ ನಿಯಂತ್ರಿಣಕ್ಕೆ ಗ್ರಾಮ ಪಂಚಾಯತ ಅಧಿಕಾರಿಗಳು ಸಿಬ್ಬಂದಿ ಜೊತೆಗೂಡಿ ಕಾರ್ಯಪಡೆ ಕಟ್ಟಿಕೊಂಡು ತನು ಮನ ಧನದಿಂದ ಕೆಲಸ ಮಾಡಿದ್ದಾರೆ, **ಅಲ್ಲದೆ ಕೋವಿಡ್ 19 ರ ಹಿಡುಗಿನಿಂದಾಗಿ ಗ್ರಾ.ಪಂದಿಂದ ಅನುಮೋದಿಸಲ್ಪಟ್ಟ ಕ್ರಿಯಾಯೋಜನೆಗಳು ಅನೇಕ ಅಭಿವೃದ್ದಿ ಕೆಲಸಗಳು ಸ್ಥಗಿತಗೊಂಡಿವೆ ಮತ್ತು ಸಾಮಾಜಿಕ ಕೆಲಸಗಳು ಸಹ ನಿಂತುಹೋಗಿವೆ.**

ಒಂದು ವೇಳೆ ಗ್ರಾ.ಪಂ. ಅವಧಿ ಮುಗಿದ ನಂತರ ಆಡಳಿತಾಧಿಕಾರಿಗಳನ್ನು ನೇಮಿಸಿದರೆ ಗ್ರಾ.ಪಂ ಚುನಾಯಿತ ಪ್ರತಿನಿಧಿಗಳಿಗೆ ತಾವು ತೆಗೆದುಕೊಂಡ ಅಭಿವೃದ್ದಿ ಕೆಲಸಗಳನ್ನು ಮಾಡಲು ಹಾಗೂ ಗ್ರಾಮದ

ಸಾಮಾಜಿಕ ನ್ಯಾಯಗಳನ್ನು ಇನ್ನಿತರ ಸಮಸ್ಯಗಳನ್ನು ಸಮರ್ಥವಾಗಿ ನಿರ್ವಹಿಸಲು ಸಾಧ್ಯವಾಗದೆ ತಮ್ಮ ಅಧಿಕಾರವಧಿಯಿಂದ ವಂಚಿತರಾಗುತ್ತಾರೆ,

ಆದ್ದರಿಂದ ಈಗಿರುವ ಗ್ರಾ.ಪಂ ಚುನಾಯಿತ ಪ್ರತಿನಿಧಿಗಳನ್ನು ಮುಂಬರುವ ಗ್ರಾ.ಪಂ ಚುನಾವಣೆ ವರೆಗೆ ಮುಂದು ವರೆಯಬೇಕೆಂದು ಈ ಸಂಬಂದ ತಾವು ಸರಕಾರ ಹಾಗೂ ಚುನಾವಣಾ ಆಯೋಗಕ್ಕೆ ಮನವರಿಕೆ ಮಾಡಿ ಕೊಟ್ಟು ನಮ್ಮ ಬೇಡಿಯನ್ನು ಈಡೆರಿಸಬೇಕೆಂದು ವಿನಂತಿ.

ಈ ಬೇಡಿಕೆಯು ಎಲ್ಲಾ ಗ್ರಾ.ಪಂಗಳ ಒಕ್ಕೂರಿನ ಆಶಯವಾಗಿದೆ.

ಸ್ಥಳ :- ನಿಲಜಿ

ದಿನಾಂಕ :- 01-05-2020

[signature]
ಅಧ್ಯಕ್ಷರು
ಗ್ರಾಮ ಪಂಚಾಯತಿ ನಿಲಜಿ.
ತಾ : ರಾಯಬಾಗ, ಜಿ : ಬೆಳಗಾವಿ

ಗ್ರಾಮ ಪಂಚಾಯತ ಸದಸ್ಯರ ಸಹಿ

1) ಶ್ರೀಮತಿ. ರಾಣಿ ಸಿದ್ದೇಶ ಕಾಂಬಳೆ ಅಧ್ಯಕ್ಷರು, ಸಹಿ [signature]
2) ಶ್ರೀ ಮಂಜುನಾಥ ಬಾಳಗೌಡ ಪಾಟೀಲ ಸದಸ್ಯರು [signature]
3) ಶ್ರೀ ಮಂಜುನಾಥ ರಾಮಚಂದ್ರ ಅಣ್ಣಗೇರಿ ,, [signature]
4) ,, ಸಾಹೇಬ ಅಣ್ಣಾಸಾಹೇಬ ಪಾಟೀಲ ,, S. A. Patil
5) ,, ಶಿವಾಜಿ ಸಿದ್ದಪ್ಪ ಹವಳೆ ,, SSH
6) ,, ರಮೇಶ ಶಿವಪ್ಪ ಮಗದುಮ್ಮ ,, R.S. magadum
7) ,, ಶಂಕರ ಭೀಮಪ್ಪ ಪಾಟೀಲ ,, ಶಂಕರ ಭೀ ಪಾಟೀಲ
8) ,, ಮಹಾವೀರ ದಶರಥ ಪಾಟೀಲ ,, ಮಹಾವೀರ ದ. ಪಾಟೀಲ
9) ಶ್ರೀಮತಿ. ಮಹಾದೇವಿ ಮ. ಕಿತ್ತೂರ ,,
10) ,, ಸೀಮಾ ಪರಶುರಾಮ ದರಬಾರ ,,
11) ,, ರಾಜಶ್ರೀ ಮಹಾವೀರ ಕರೋಶಿ ,, RmK
12) ,, ಶೈಲಾ ಶಿವಾಜಿ ಮಾನಗಾವೆ ,, ಶೈಲಾ. ಶಿವಾಜಿ ಮಾನಗಾವೆ.
13) ,, ಶಾಂತಾ ಚಿದಾನಂದ ಅಕ್ಕಿವಾಟೆ ,, SCA
14) ,, ಸಾವಿತ್ರಿ ಸೋಮಪ್ಪ ಹವಳೆ ,,